ಚರ್ಚೆಯನ್ನು ಮಾಡಬೇಕು.

ಶ್ರೀ ಬಾಲರಾಜ್ ಎಸ್.: ಮಾನ್ಯ ಉಪಾಧ್ಯಕ್ಷರೆ, ಕೊಳ್ಳೇಗಾಲ ಕ್ಷೇತ್ರಕ್ಕೆ ಅಗ್ನಿಶಾಮಕ ಠಾಣೆ ಅವಶ್ಯಕತೆ ಇದೆ ಎಂದು ಕೇಳಿದ್ದೇನೆ. 40ಕಿ.ಮೀ.ದೂರದಿಂದ ಬೆಂಕಿ ಅನಾಹುತವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತಿರುವಂತಹ ಪ್ರಶ್ನೆಗೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಚಾಮರಾಜನಗರ ಮತ್ತು ಮಳವಳ್ಳಿಗಳಿಂದ ಅಗ್ನಿ ಅಪಘಾತಗಳನ್ನು ನಂದಿಸುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಸುಮಾರು ಒಂದು ಕಾಲು ಗಂಟೆಗಳ ಕಾಲ ಬೇಕು ಅದು ನಮ್ಮ ಕೊಳ್ಳೇಗಾಲ ಪಟ್ಟಣಕ್ಕೆ ಬಂದು ಸೇರುವುದಕ್ಕೆ. ಅದು ಎಷ್ಟು ಹೊತ್ತು ಬಿಟ್ಟುಕೊಂಡು ಬರುವ ತನಕ ಅದನ್ನು ನಂದಿಸುವುದಕ್ಕೆ ಸಾಧ್ಯವಿದೆ. ಆದರೆ ಅನಾಹುತವನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಕೊಳ್ಳೇಗಾಲ ಪಟ್ಟಣವು ಸುಮಾರು 50ಸಾವಿರ ಜನಸಂಖ್ಯೆಯನ್ನು ಹೊಂದಿರುವುದರಿಂದ ಅತ್ಯಾವಶ್ಯಕವಾಗಿ ನಮಗೆ ಒಂದು ಅಗ್ನಿಶಾಮಕ ಠಾಣೆ ಬೇಕಾಗಿದೆ, ಅದನ್ನು ಆದ್ಯತೆಯ ಮೇರೆಗೆ ಮಾಡಬೇಕು, ನಾನು ಕಳೆದ ವರ್ಷದಿಂದಲೂ ಕೂಡ ಕೇಳುತ್ತಿದ್ದೇನೆ, ದಯವಾಡಿ ಈ ಸಲವಾದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5882
ಸದಸ್ಯರ ಹೆಸರು : ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ವಿಭಾಗದಲ್ಲಿರುವ ಒಟ್ಟು ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು);	1. ಬಾಗಲಕೋಟೆ, 2. ಬೀಳಗಿ 3. ಇಳ್ಕಲ್ 4. ಅಮ್ಮಿನಗಡ 5. ಹುನಗುಂದ 6.ಬಾದಾಮಿ 7. ಕೇರೂರು 8. ಗುಳೇದಗುಡ್ಡ 9. ಕುಳಗೇರಿ ಕ್ರಾಸ್ 10. ಮುದೋಳ 11. ಬನಹಟ್ಟಿ 12. ಜಮಖಂಡಿ 13. ರಬಕವಿ 14. ತೆರದಾಳ 15. ಲೋಕಾಪುರ 16. ಮಹಾಲಿಂಗಪುರ.
ಆ	ಬಾಗಲಕೋಟೆ ವಿಭಾಗದಲ್ಲಿ ಹೊಸ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ ಉದ್ದೇಶಿತ ಸ್ಥಳ ಯಾವುದು;	ಹೌದು ಬಾಗಲಕೋಟೆ–ನವನಗರದಲ್ಲಿ

ಕ್ರಸಂ.	ಪ್ರಶ್ನೆಗಳು	ಉತ್ತರಗಳು
೫.	ಹುನಗುಂದ ತಾಲೂಕಿನ ಇಳಕಲ್‌ನಲ್ಲಿ ಹೊಸ ಬಸ್ ನಿಲ್ದಾಣ ಮಾಡಲು ಈಗಾಗಲೇ ಮಂಜೂರಾತಿ ನೀಡಿರುವುದು ನಿಜವಲ್ಲವೆ; ಹಾಗಿದ್ದಲ್ಲಿ, ಬಸ್ ನಿಲ್ದಾಣ ಪ್ರಾರಂಭಿಸಲು ಮಂಜೂರು ಆಗಿರುವ ಹಣವೆಷ್ಟು ಮತ್ತು ಯಾವಾಗ ಕಾಮಗಾರಿ ಪ್ರಾರಂಭಿಸಲಾಗುವುದು?	ಇಲ್ಲ ಉದ್ಭವಿಸುವುದಿಲ್ಲ.

ಶ್ರೀ ಧರ್ಮಸಿಂಗ್: ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಅಗ್ನಿಶಾಮಕ ಠಾಣೆ ಬೇಕಾಗಿದೆ, ಪ್ರಸ್ತುತ ಅಲ್ಲಿ ಏನಾದರೂ ದುರಂತವಾದರೆ ಬೇರೆ ತಾಲೂಕಿನಿಂದ ತರತಕ್ಕಂತಹದ್ದರ ಬಗ್ಗೆ ಹೇಳಿದ್ದೇನೆ. ಈಗಾಗಲೇ ನಾವು ಅದರ ಬಗ್ಗೆ ಆರ್ಡರನ್ನು ಕೂಡ ಬಿಡುಗಡೆ ಮಾಡಿದ್ದೇನೆ. ಅತಿ ಶೀಘ್ರದಲ್ಲಿ ಕೆಲಸ ಪ್ರಾರಂಭವಾಗುತ್ತದೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಹುನಗುಂದ ತಾಲೂಕಿನ ಇಳಕಲ್ ಪಟ್ಟಣದಲ್ಲಿ ಸುಮಾರು 60 ಸಾವಿರ ಜನಸಂಖ್ಯೆ ಇರತಕ್ಕಂಥ ಒಂದು ದೊಟ್ಟ ಪಟ್ಟಣವಾಗಿದೆ. ಆ ಪಟ್ಟಣಕ್ಕೆ ಪ್ರತಿನಿತ್ಯ ಸುಮಾರು 10ರಿಂದ 15 ಸಾವಿರ ಜನಸಂಖ್ಯೆಯ ಫ್ಲೋಟಿಂಗ್ ಪಾಪ್ಯುಲೇಶನ್ ಇರುವುದರಿಂದ ಸುಮಾರು 1965ರಲ್ಲಿ ಕೇವಲ 50 ಜನರು ಕುಳಿತುಕೊಳ್ಳುವಂತಹ ಬಸ್ ನಿಲ್ದಾಣ ಇರುವುದರಿಂದ ಈಗ ಇಳಕಲ್ ಘಟಕದಿಂದ ಸುಮಾರು 81 ಬಸ್‌ಗಳು ಆಪರೇಟ್ ಮಾಡುತ್ತಿರುವುದರಿಂದ 150 ಟ್ರಿಪ್‌ಗಳನ್ನು ಇಳಕಲ್ ಡಿಪೋದಿಂದಲೇ ಮತ್ತು 220 ಟ್ರಿಪ್‌ಗಳನ್ನು ಬೇರೆ ಡಿಪೋ ಮತ್ತು ವಿಭಾಗಗಳಿಂದ ಆಪರೇಟ್ ಮಾಡುತ್ತಿರುವುದರಿಂದ ಅಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಜನದಟ್ಟಣೆ ಇರುವುದರಿಂದ ಜನರು ಬಸ್‌ನಿಲ್ದಾಣದಲ್ಲಿ ಕೂರುವುದಕ್ಕೆ ವ್ಯವಸ್ಥೆ ಇಲ್ಲ, ಶೌಚಾಲಯದ ವ್ಯವಸ್ಥೆಯೂ ಕೂಡ ಇಲ್ಲ. ಇಲ್ಲಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇಳಕಲ್ ನಗರದಲ್ಲಿ ಬಸ್‌ನಿಲ್ದಾಣ ಮಾಡುವ ಮಂಜೂರಾತಿ ಇಲ್ಲವೆಂದು ಹೇಳಿದ್ದಾರೆ. ಪ್ರಾರಂಭಿಸುವುದು ಯಾವಾಗ ಎಂದು ಕೇಳಿದರೆ, ಉದ್ಭವಿಸುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಇಳಕಲ್ ಘಟಕದಿಂದಲೇ ಕಳೆದ ಮೇ ತಿಂಗಳಲ್ಲಿ 1 ಕೋಟಿ 34ಲಕ್ಷ ರೂಪಾಯಿಗಳು ಅರ್ನಿಂಗ್ ಇದೆ, 27 ಲಕ್ಷ ರೂಪಾಯಿಗಳು ಈ ಘಟಕದಿಂದ

ಲಾಭ ಬಂದಿರುತ್ತದೆ. ಆದ್ದರಿಂದ ಈ ಇಳಕಲ್ ನಗರವು ನ್ಯಾಷನಲ್ ಹೈವೆ-13ರಲ್ಲಿರುವುದರಿಂದ ಸದರಿ ನಗರಕ್ಕೆ ಒಂದು ಬಹುದೊಡ್ಡ ಬಸ್‌ನಿಲ್ದಾಣದ ಅವಶ್ಯಕತೆ ಇರುವುದರಿಂದ ಕನಿಷ್ಟ 500 ಜನರಿಗೆ ಕೂರುವಷ್ಟು ದೊಡ್ಡ ಬಸ್ ನಿಲ್ದಾಣ ಬೇಕು, ಸುಮಾರು 370 ಟ್ರಿಪ್‌ಗಳು ಹೊರ ಹೋಗುವುದು ಮತ್ತು ಒಳಬರುವ ದಟ್ಟಣೆ ಇರುವುದರಿಂದ ಇಳಕಲ್ ನಗರಕ್ಕೆ ಒಂದು ಬಸ್ ನಿಲ್ದಾಣವನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಹುನಗುಂದ ತಾಲೂಕು ಇಳಕಲ್‌ನಲ್ಲಿ ಬಸ್‌ನಿಲ್ದಾಣ ಮಾಡುವ ಬೇಡಿಕೆಯು ಬಹಳ ದಿವಸಗಳಿಂದಲೂ ಇದೆ. ಇರತಕ್ಕಂತಹ ಬಸ್ ನಿಲ್ದಾಣವನ್ನು ನವೀಕರಣ ಮಾಡಬೇಕು ಎಂಬುದರ ಬಗ್ಗೆ ಯೋಚನೆಯೂ ಕೂಡ ಕಾರ್ಪೊರೇಷನ್ ಮುಂದೆ ಇದೆ. ಅದಕ್ಕೆ ಹೆಚ್ಚಿನ ಸ್ಥಳಾವಕಾಶ ಕೊಡಬೇಕು, ಈಗ ಇರುವುದನ್ನೇ ವ್ಯವಸ್ಥಿತವಾಗಿ ಮಾಡಬೇಕಾದರೆ ಅದಕ್ಕೆ ಸಾಕಷ್ಟು ಹಣವು ಬೇಕಾಗುತ್ತದೆ. ಹಿಂದೆ ನಾವು ಬಾಗಲಕೋಟೆ ವ್ಯಾಪ್ತಿಯಲ್ಲಿ ಮುಖ್ಯವಾಗಿ ಬಾಗಲಕೋಟೆ ನವನಗರದಲ್ಲಿರುವಂತಹ ಸಂಸ್ಥೆ ಸುಮಾರು 24 ಎಕರೆಯ 11ಗುಂಟೆಗಳ ನಿವೇಶನ ಇದ್ದು, ಈ ಪೈಕಿ 6 ಎಕರೆ 17 ಗುಂಟೆ ನೂತನ ಬಸ್ ನಿಲ್ದಾಣವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯ ಆಯವ್ಯಯದಲ್ಲಿ ಸುಮಾರು 2 ಕೋಟಿ ರೂಪಾಯಿಗಳು ಅದಕ್ಕೆ ಬೇಕಾಗುತ್ತದೆ. ಇದಕ್ಕೂ ಕೂಡ ಸುಮಾರು 1 ಕೋಟಿಗಿಂತಲೂ ಹೆಚ್ಚಿನ ಹಣ ಬೇಕಾಗುತ್ತದೆ. ಅದರ ಬಗ್ಗೆ ನಾವು ಹಣದ ಲಭ್ಯತೆಯನ್ನು ನೋಡಿಕೊಂಡು ಒಂದೊಂದಾಗಿ ಮಾಡುತ್ತೇವೆ. ಅವರು ಹೇಳಿದ ಹಾಗೆ ಒಂದು ಘಟಕ ಲಾಭದಲ್ಲಿರುತ್ತದೆ, ಇನ್ನೊಂದು ಘಟಕ ಲುಕ್ಸಾನ್‌ನಲ್ಲಿ ಇರುತ್ತದೆ. ಹುಬ್ಬಳ್ಳಿ-ಧಾರವಾಡ ನಾರ್ಥ್‌ವೆಸ್ಟ್ ಕೆಎಸ್‌ಆರ್‌ಟಿಸಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಸುಮಾರು 30ಕೋಟಿ ರೂಪಾಯಿಗಳು ಈ ವರ್ಷ ಲುಕ್ಸಾನ್‌ನಲ್ಲಿದೆ. ಅದು ಒಂದೆ ಲುಕ್ಸಾನ್‌ನಲ್ಲಿದೆ, ಉಳಿದೆಲ್ಲಾ ಕಾರ್ಪೋರೇಷನ್‌ಗಳು ಲಾಭದಲ್ಲಿ ಕೆಲಸವನ್ನು ಮಾಡುತ್ತಿವೆ. ಅದಕ್ಕಾಗಿ ನಾವು ಓವರ್‌ಆಲ್ ಲೆಕ್ಕವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಇದಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಮುಂದಿನ ಬಜೆಟ್‌ನಲ್ಲಿ ಹಣವನ್ನು ಇಟ್ಟು ನವೀಕರಣ ಮಾಡುವಂತಹ ಕೆಲಸವನ್ನು ಕೂಡ ಮಾಡುತ್ತೇವೆ ಮತ್ತು ಹೋದ ನವನಗರದಲ್ಲಿ ಒಂದು ಹೊಸ ಬಸ್‌ಸ್ಟ್ಯಾಂಡ್‌ನ್ನು ಮಾಡತಕ್ಕಂತಹ ಕೆಲಸವನ್ನು ಕೂಡ ಮುಂದೆ ತೆಗೆದುಕೊಳ್ಳುತ್ತೇವೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್: ಈ ಪ್ರದೇಶದಲ್ಲಿ ಈಗಾಗಲೇ 3 ಎಕರೆ ಪ್ರದೇಶ ಇದೆ. ತಾವು 2 ಟೈಪ್ ಅಥವಾ 3 ಟೈಪ್ ಬಸ್‌ಸ್ಟ್ಯಾಂಡ್‌ನ್ನು ಮಂಜೂರು ಮಾಡಿಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮೊನ್ನೆ ಒಂದು 50 ರಿಂದ 60 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೀರಿ. ರಾಮತಾಳ ಯೋಜನೆಗೆ ಸಮಾಧಾನವಾಗಿರಿ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್: ಅಲ್ಲಿ ಬಸ್‌ಸ್ಟ್ಯಾಂಡ್‌ನ ಅವಶ್ಯಕತೆ ಬಹಳ ಇದೆ. ಡೈಲಿ ಅಲ್ಲಿ 370 ಟ್ರಿಪ್‌ಗಳು ಆಪರೇಟ್ ಆಗುತ್ತಿದೆ.

ಶ್ರೀ ಗೋವಿಂದ ಎಂ ಕಾರಜೋಳ ಇವರ ಪರವಾಗಿ ನಿರಾಣಿ ಮುರುಗೇಶ್ ರುದ್ರಪ್ಪ :– ಮಾನ್ಯ ಉಪಾಧ್ಯಕ್ಷರೆ, ಆಗಸ್ಟ್ 2005ರಲ್ಲಿ ಹೊಸ ಬಸ್‌ಡಿಪೋವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ನಾನು ಮೊಟ್ಟಮೊದಲನೆಯದಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಅದನ್ನು ಪ್ರಾರಂಭ ಮಾಡುವುದಕ್ಕಿಂತಲೂ ಮುಂಚೆ ಅಲ್ಲಿ ಸಿಬ್ಬಂದಿಗಳು ಬೇಕಾಗುತ್ತದೆ. ಅಲ್ಲಿಗೆ ಎಷ್ಟು ಜನ ಡ್ರೈವರ್‌ಗಳು,

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5053
ಸದಸ್ಯರ ಹೆಸರು : ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಬೀಳಗಿ ಪಟ್ಟಣದ ಬಸ್ ಡಿಪೋ ಕಾರ್ಯಾರಂಭ ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ.	ಹಾಗಿದ್ದಲ್ಲಿ, ಬಾಕಿ ಉಳಿದಿರುವ ಇಂಧನದ ಟ್ಯಾಂಕ್ ಹಾಗೂ ವಿದ್ಯುಚ್ಛಕ್ತಿಯ ಸಂಪರ್ಕದ ಸೌಲಭ್ಯ ಒದಗಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ.	ಇಂಧನ ಟ್ಯಾಂಕ್‌ನ್ನು ಭಾರತೀಯ ತೈಲ ನಿಗಮದ ವತಿಯಿಂದ ಅಳವಡಿಸುವ ಬಗ್ಗೆ ಅಗ್ನಿಶಾಮಕ ದಳದವರಿಂದ ಆಕ್ಷೇಪಣೆ ಇದ್ದು, ಇಲಾಖೆಯ ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿ ನಿರಾಕ್ಷೇಪಣ ಪತ್ರ ಪಡೆಯುವ ಹಂತದಲ್ಲಿದೆ. ಹೆಸ್ಕಾಂ ಸೇವೆಯೊಂದಿಗೆ ವಿದ್ಯುಚ್ಛಕ್ತಿ ಕೆಲಸಗಳು ಸಂಪೂರ್ಣಗೊಂಡಿರುತ್ತವೆ.
ಇ.	ಯಾವ ನಿರ್ದಿಷ್ಟ ಅವಧಿಯಲ್ಲಿ ಕಾರ್ಯಾರಂಭಕ್ಕೆ ಅನುಮತಿ ಕೊಡಲಾಗುವುದು?	ಆಗಸ್ಟ್ 2005ರೊಳಗೆ ಕಾರ್ಯರಂಭಕ್ಕೆ ಅನುಮತಿ ಕೊಡಬಹುದಾಗಿದೆ.